ಮಿಸ್ ನಂಃ 825/2019
ದಿಃ 27.07.2021.
ಪಿ.ಡಬ್ಲ್ಯೂ-01

## ಮುಖ್ಯ ವಿಚಾರಣೆಃ ಶ್ರೀ ಸಿ ಟಿ ವಕೀಲರಿಂದಃ-

1. ನಾನು ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರವನ್ನು ಹಾಜರ್ಪಡಿಸಿದ್ದೇನೆ. ಪ್ರಮಾಣ ಪತ್ರದಲ್ಲಿ ಬರೆಸಿದ ವಿಷಯ ಸತ್ಯ ವಾಗಿದೆ..

2. ಸರ್ವೆ ನಂಃ 176/1 ರ ಪಹಣಿ ಪತ್ರಿಕೆ ಹಾಜರುಪಡಿಸಿದ್ದು ಅದನ್ನು ನಿಪಿ-01 ಎಂದು,

3. ಕರ್ನಾಟಕ ಸರ್ಕಾರದವರು ನಿಗದಿ ಪಡಿಸಿದ ಪರಿಷ್ಕೃತ ಮಾರುಕಟ್ಟೆ ಬೆಲೆ ಪಟ್ಟಿಯ ದೃಡೀಕೃತ ನಕಲಿನ ದೃಢೀಕೃತ ನಕಲು ಹಾಜರ್ಪಡಿಸಿದ್ದು ಅದನ್ನು ನಿಪಿ-02 ಎಂದು ಗುರುತಿಸಲಾಯಿತು.

4. ನನಗೆ ದಿಃ 23.08.2018 ರಂದು ಎದುರುದಾರರು ನನಗೆ ನೀಡಿರುವ ನೋಟೀಸ್‌ನ್ನು ಹಾಜರುಪಡಿಸಿದ್ದು ಅದನ್ನು ನಿಪಿ-03 ಅಂತ ಗುರುತಿಸಲಾಯಿತು.

## ಪಾಟೀ ಸವಾಲುಃ- ಶ್ರೀ ಎಂ ಜಿ ಆರ್ ವಕೀಲರಿಂದಃ

ನನ್ನದ್ದು ಖುಷಿ ಜಮೀನು ಎಂದರೆ ನಿಜ, ನನ್ನ ಜಮೀನಿನಲ್ಲಿ ತೆಂಗೂ ಅಡಿಕೆ ಮತ್ತು ನಿಂಬೆ ಪಸಲನ್ನು ಬೆಳೆಯುತ್ತಿದ್ದೇನೆ ಅಂತ ತೋರಿಸಲು ಸಂಬಂಧಸಿದ ಅಧಿಕಾರಿಗಳಿಂದ ಪಡೆದ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ನಿಜ . ನನ್ನ ಜಮೀನಿನಲ್ಲಿ ಎದುರುದಾರರು ಅರ್ಜಿಯಲ್ಲಿ ಹೇಳಿದಂತೆ ಯಾವುದೇ ಲೈನ್ ಮತ್ತು ಗೋಪುರವನ್ನು ನಿರ್ಮಿಸಿಲ್ಲ ಎಂದರೆ ಸರಿಯಲ್ಲ.. ಎದುರುದಾರರು ಲೈನ್ ಎಳೆಯುವಾಗ ನನ್ನ ಜಮೀನಿನಲ್ಲಿ ಇರುವ ತೆಂಗಿನ ಮರಗಳು ಕಡಿದಿರುತ್ತಾರೆ ಅಂತ ಹೇಳಿದಿದ್ದಕ್ಕೆ ಪುರಕವಾಗಿ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ನಿಜ. ಎದುರುದಾರರರು ಲೈನ್ ಎಳೆದ ಸಲುವಾಗ ಮತ್ತು ತೆಂಗಿನ ಮರಗಳನ್ನು ನಾಶಪಡಿಸಿದ್ದನ್ನು

ತೋರಿಸುವ ಸಲುವಾಗಿ ಯಾವುದೇ ಛಾಯಾ ಚಿತ್ರಗಳನ್ನು ಹಾಜರುಪಡಿಸಿಲ್ಲ ಎಂದರೆ ನಿಜ. ನಮ್ಮ ಜಮೀನು ಪ್ರತಿ ಎಕರೆಗೆ ರೂ 10 ಲಕ್ಷ ಬೆಲೆ ಬಾಳುತ್ತಿತ್ತು ಅಂತ ತೋರಿಸಲು ಯಾವುದೇ ದಾಖಲಾತಿ ಹಾಜರುಪಡಿಸಿದ್ದೀರಾ ಅಂದರೆ ಇಲ್ಲ. ರೂ. 10 ಲಕ್ಷ ವರಮಾನ ಬರುತ್ತಿತ್ತು ಅಂತ ತೋರಿಸಲು ಯಾವುದೇ ದಾಖಲಾತಿ ಹಾಜರುಪಡಿಸಿದ್ದೀರಾ ಅಂದರೆ ಇಲ್ಲ . ತೆಂಗಿನ ಮರಗಳನ್ನು ನಾಶಪಡಿಸಿದ್ದರಿಂದ 5 ಲಕ್ಷ ರೂ ನನಗೆ ಹಾನಿಯಾಗಿದೆ ಅಂತ ತೋರಿಸಲು ಯಾವುದೇ ದಾಖಲೇ ಹಾಜರುಪಡಿಸಿಲ್ಲ , ಎದುರುದಾರು ನನ್ನ ಜಮೀನಿನಲ್ಲಿ ಯಾವುದೇ ಲೈನ್ ಎಳೆದಿಲ್ಲ , ಯಾವುದೇಮರ ನಾಶಪಡಿಸಿಲ್ಲ ಮತ್ತು ಗೋಪುರ ಕಟ್ಟಿಲ್ಲ ಎಂದರೆ ಸರಿಯಲ್ಲ, ಎದುರುದಾರರು ಸರಿಯಾದ ಪರಿಹಾರ ಧನ ನೀಡಿದ್ದರೂ ಸಹ ಹೆಚ್ಚಿನ ಪರಿಹಾರ ಪಡೆಯಲು ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸುಳ್ಳು

ಓ ಹೇ ಕೇ ಸರಿ ಇದೆ

*(ಬನ್ನಿಕಟ್ಟಿ ಹನುಮಂತಪ್ಪ. ಆರ್)*
*1* ನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು ,
ಚಿತ್ರದುರ್ಗ